॥ ಶ್ರೀ ಚನ್ನಕೇಶವ ಪ್ರಸನ್ನ ॥

# ಶ್ರೀ ಚನ್ನಕೇಶವ ದೇವಾಲಯ, ನಾಗಿನಮನೆ

## ಶ್ರೀ ದೇವರ ಪುನಃ ಪ್ರತಿಷ್ಠಾಪನಾ ಮಹೋತ್ಸವ

ದಿನಾಂಕ: 7,8,9 ಫೆಬ್ರವರಿ 2026




**ಶ್ರೀ ಚನ್ನಕೇಶವ ದೇವಾಲಯ ಟ್ರಸ್ಟ್ (ರಿ.,) ನಾಗಿನಮನೆ.**

ಗ್ರಾಮ: ಕುಡೇಗೋಡ, ಅಂಚೆ: ದೊಡ್ಮನೆ, ತಾ: ಸಿದ್ದಾಪುರ ಉತ್ತರ ಕನ್ನಡ, 581 322

shreechannakeshavadevalaya@gmail.com | Mo: 9481049606, 8762151249

www.shreechannakeshavadevastana.org


**ಆಮಂತ್ರಣ**

Scanned with CamScanner

ಆಸ್ತಿಕ ಮಹನೀಯರೇ,                                    ವಂದನೆಗಳು.

ಸಿದ್ದಾಪುರ ತಾಲೂಕಿನ ನಾಗಿನಮನೆಯಲ್ಲಿ ನೂತನವಾಗಿ ನಿರ್ಮಿಸಿದ ಶಿಲಾಮಯ ಗರ್ಭಗೃಹದಲ್ಲಿ ಶ್ರೀ ಚನ್ನಕೇಶವ ದೇವರ ಪುನಃ ಪ್ರತಿಷ್ಠಾಪನೆಯು ಶ್ರೀ ರಾಮಚಂದ್ರಾಪುರ ಮಠದ ಶ್ರೀ ಶ್ರೀ ರಾಘವೇಶ್ವರ ಮಹಾಸ್ವಾಮಿಗಳ ಆಶೀರ್ವಾದ ಮತ್ತು ವಿದ್ವಾಂಸರ ಮಾರ್ಗದರ್ಶನದಲ್ಲಿ ಸ್ವಸ್ತಿ ಶ್ರೀ ವಿಶ್ವಾವಸು ಸಂವತ್ಸರದ ಮಾಘ ಬಹುಳ ೬-೭-೮ **ದಿನಾಂಕ : 7-8 ಮತ್ತು 9 ಫೆಬ್ರವರಿ, 2026 ಶನಿವಾರ, ರವಿವಾರ ಮತ್ತು ಸೋಮವಾರ** ನಡೆಸಲು ತೀರ್ಮಾನಿಸಲಾಗಿದೆ. ಈ ಧಾರ್ಮಿಕ ಕಾರ್ಯಕ್ರಮದಲ್ಲಿ ತಾವೆಲ್ಲ ತನು-ಮನ-ಧನ ಸೇವೆಯೊಂದಿಗೆ ಕುಟುಂಬ ಸಮೇತ ಭಾಗಿಯಾಗಿ, ಪ್ರಸಾದ ಸ್ವೀಕರಿಸಿ, ಶ್ರೀ ಚನ್ನಕೇಶವ ದೇವರ ಕೃಪೆಗೆ ಪಾತ್ರರಾಗಿ, ಕೃತಾರ್ಥರಾಗಬೇಕೆಂದು ಆಶಿಸಿ ತಮ್ಮೆಲ್ಲರನ್ನು ಆಮಂತ್ರಿಸುತ್ತೇವೆ.

ದೇವಾಲಯದ ಆಡಳಿತ ಮಂಡಳಿ
ಮತ್ತು ಕುಡೇಗೋಡ ಗ್ರಾಮದ ಸಮಸ್ತ ನಾಗರಿಕರು, ಶ್ರೀ ದೇವರ ಭಕ್ತ ವೃಂದ

## ಕಾರ್ಯಕ್ರಮಗಳ ವಿವರ :

**ದಿನಾಂಕ : 7-2-2026 ಶನಿವಾರ** : ಬೆಳಿಗ್ಗೆ ಪ್ರಾರ್ಥನೆ, ಶುದ್ಧಿಕರ್ಮ, ಪುಣ್ಯಾಹ, ದೇವನಾಂದೀ, ಪ್ರಧಾನ ಸಂಕಲ್ಪ, ಋತ್ವಿಕವರಣೆ, ಮಧುಪರ್ಕ, ಅಗ್ನಿಗ್ರಹಣ, ಗಣೇಶಶಾಂತಿ.

ಅದೇದಿನ ರಾತ್ರಿ : ಭೂತ ಶುದ್ಧಿ, ವಾಸ್ತು ರಾಕ್ಷೋಘ್ನ ವಿಧಾನಗಳು, ಕುಂಡ ಮಂಟಪ, ಸಂಸ್ಕಾರ, ಅಗ್ನಿಜನನ, ಅಧಿವಾಸ ಹೋಮ, ಅಧಿವಾಸ ಪೂಜೆ, ಬಲಿ ಇತ್ಯಾದಿ.

**ದಿನಾಂಕ : 8-2-2026 ರವಿವಾರ** : ಬೆಳಿಗ್ಗೆ ನವಗ್ರಹ ಶಾಂತಿ, ರತ್ನಾನ್ಯಾಸ ಹೋಮ, ಬಂಧಶುದ್ಧಿ, ಪ್ರತಿಷ್ಠಾ ಹೋಮ, **ಬೆಳಿಗ್ಗೆ 10-31ರ ಮೀನ ಲಗ್ನದ ಸುಮುಹೂರ್ತದಲ್ಲಿ ಪ್ರತಿಷ್ಠೆ** ಅಷ್ಟಬಂಧ, ಪ್ರಾಣಪ್ರತಿಷ್ಠೆ, ತತ್ವ ಕಲಾನ್ಯಾಸ, ಧ್ವಜಸ್ಥಾಪನೆ, ಧ್ವಜಾರೋಹಣ, ಬಲಿ ಇತ್ಯಾದಿ.

ಅದೇದಿನ ರಾತ್ರಿ : ಮಂಡಲ ದರ್ಶನ, ಬ್ರಹ್ಮಕಲಶ ಸ್ಥಾಪನೆ, ರಂಗ ಪೂಜಾ, ಅಷ್ಟಬಂಧ, ರಾಜೋಪಚಾರ ಸೇವಾ ಉತ್ಸವ.

**ದಿನಾಂಕ : 9-2-2026 ಸೋಮವಾರ** : ಬೆಳಿಗ್ಗೆ ಪೂರ್ಣಕಲಾವೃದ್ಧಿ, ನಿರೀಕ್ಷೆ, ಬ್ರಹ್ಮಕಲಶಾಭಿಷೇಕ, ಮಹಾಬಲಿ, ಪ್ರಾಯಶ್ಚಿತ್ತ ಶಾಂತಿ ಹೋಮಗಳು, ಶ್ರೀಸೂಕ್ತ ಹೋಮ, ಪುರುಷಸೂಕ್ತ ಹೋಮ, ಪೂರ್ಣಾಹುತಿ, ಮಹಾಪೂಜೆ, ತೀರ್ಥ ಪ್ರಸಾದ ವಿತರಣೆ, ಪ್ರಸಾದ ಭೋಜನ.

ಮಂಗಲ ಸಮಾರಂಭ

Scanned with CamScanner

## ಪ್ರತಿಷ್ಠಾಪನಾ ಮಹೋತ್ಸವದ ಸೇವೆಗಳು:

ಈ ವಿಶೇಷ ದಿನಗಳಲ್ಲಿ ಕೆಳಗಿನ ಸೇವೆಗಳನ್ನು ಮಾಡಲು ಎಲ್ಲಾ ಭಕ್ತಾದಿಗಳಿಗೆ ಅವಕಾಶ ಇರುತ್ತದೆ.

- ಅನ್ನಸಂತರ್ಪಣೆ ಸೇವೆ: 5 ಜನರಿಗೆ ರೂ. 501
  (5ರ ಗುಣಕದಲ್ಲಿ ಹೆಚ್ಚಿನ ಮೊತ್ತ ನೀಡಬಹುದು)
- ಶಿಖರ ಕಳಶ ಸೇವೆ: ರೂ. 1001 ಅಥವಾ ಅದಕ್ಕಿಂತ ಹೆಚ್ಚು
- ಆಶ್ಲೇಷಾ ಬಲಿ ಸೇವೆ: ರೂ. 1501 ಅಥವಾ ಅದಕ್ಕಿಂತ ಹೆಚ್ಚು
- ಕುಂಭಾಭಿಷೇಕ ಸೇವೆ: ರೂ. 1501 ಅಥವಾ ಅದಕ್ಕಿಂತ ಹೆಚ್ಚು
- ಸಮಗ್ರ ಮಹಾಸೇವೆ: ರೂ. 5001 ಅಥವಾ ಅದಕ್ಕಿಂತ ಹೆಚ್ಚು
- ಯಕ್ಷಗಾನ ಸೇವೆ: ರೂ. 501 ಅಥವಾ ಅದಕ್ಕಿಂತ ಹೆಚ್ಚು

ಭಕ್ತಾದಿಗಳು ತಮ್ಮ ಇಚ್ಛಾನುಸಾರ ಸೇವೆಗಳಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾಗುವಂತೆ ವಿನಂತಿ. ಸೇವೆಗೆ ನೀಡಿದವರು ನಕ್ಷತ್ರಾದಿಗಳ ವಿವರವನ್ನು ನೀಡಬೇಕು.

## ಸಾಂಸ್ಕೃತಿಕ ಕಾರ್ಯಕ್ರಮ

**ಸಂಗಮ್ ಸೇವಾ ಟ್ರಸ್ಟ್ (ರಿ.) ಕಲ್ಲಾಳ**

ಇದರ ಸಹಕಾರ ಹಾಗೂ ಸಂಯೋಜನೆಯಲ್ಲಿ

**ದಿ|| ರಾಮ ಕಲ್ಲಾಳ ಇವರ ಸ್ಮರಣಾರ್ಥ**

**ಯಕ್ಷಗಾನ ಸೇವೆ**

**ಪ್ರಸಂಗ : ಲವ–ಕುಶ**

(ಅತಿಥಿ ಕಲಾವಿದರಿಂದ)

ದಿನಾಂಕ: 09–02–2026 ಸೋಮವಾರ

ರಾತ್ರಿ 9.00 ರಿಂದ 12–00 ಗಂಟೆಯವರೆಗೆ

ಸ್ಥಳ: ಶ್ರೀ ಚನ್ನಕೇಶವ ದೇವಾಲಯದ ಆವಾರ, ನಾಗಿನಮನೆ

Scanned with CamScanner

ದೇವಸ್ಥಾನಕ್ಕೆ ದೇಣಿಗೆ ಸಲ್ಲಿಸುವವರು ಈ ಕೆಳಗಿನ ಬ್ಯಾಂಕ್ ಖಾತೆಗೆ ನೇರವಾಗಿ ಅಥವಾ ಯುಪಿಐ ಮುಖಾಂತರ ಹಣ ಸಂದಾಯ ಮಾಡಿ ರಶೀದಿ ಪಡೆಯಬೇಕಾಗಿ ವಿನಂತಿ.

Name: Shree Channakeshava Devalaya Trust
Account No: 03382200059088
IFSC Code: CNRB0010338
UPI Id: 248427748059088@cnrb
Canara Bank, Bilagi (Branch) Tq: Siddapur (U.K.)

ಭಕ್ತರು ದೇವಸ್ಥಾನದ ಈ ಕಾರ್ಯಕ್ರಮಕ್ಕೆ ಸುವಸ್ತು ಮತ್ತು ಕಟ್ಟಡ ಸಾಮಗ್ರಿಗಳನ್ನು ನೀಡಬಹುದು.
ಮಾಹಿತಿಗಾಗಿ ಸಂಪರ್ಕಿಸಿ: 8762151249, 9480080270

ಧನ್ಯವಾದಗಳೊಂದಿಗೆ,
ಗೌರವಾಧ್ಯಕ್ಷರು, ಅಧ್ಯಕ್ಷರು ಹಾಗೂ ಕಾರ್ಯದರ್ಶಿ
ಆಡಳಿತ ಮಂಡಳಿಯ ಸದಸ್ಯರುಗಳು, ಸರ್ವಭಜಕರು ಮತ್ತು ಊರನಾಗರಿಕರು

॥ ಲೋಕಾ ಸಮಸ್ತಾಃ ಸುಖಿನೋ ಭವಂತು ॥

ತೆರೆದ-ಅಂಚೆ

ಶ್ರೀಮತಿ/ಶ್ರೀ ______________________

______________________

______________________

ಸರಸ್ವತಿ ಮೀಡಿಯಾ
9242209494

Scanned with CamScanner